1	2	3	4	5	6
		ಗುಲ್ಬರ್ಗಾ ಜಿಲ್ಲೆ			
15.	ಅಫ್‌ಜಲಪುರ	ಅಫ್‌ಜಲಪುರ ಕೆರೆ	–	–	ಅಫ್‌ಜಲಪುರ ಕೆರೆಯ ಟೆಲ್ ಚಿನಾದಲ್ಲಿ ಅಕ್ರಮ ಒತ್ತುವರಿ ತೆರವು ಗೊಳಿಸಲು ಸಂಬಂಧಪಟ್ಟ 10 ಜನರಿಗೆ ನೋಟೀಸ್ ನೀಡಿ ತೆರವುಗೊಳಿಸುವ ಪ್ರಕ್ರಿಯೆ.

535(792) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುವ ಜಮೀನು ವಿಸ್ತೀರ್ಣವೆಷ್ಟು; ನಿರ್ವಸತಿಗರಾಗುವ ಜನರ ಸಂಖ್ಯೆ ಎಷ್ಟು; (ಗ್ರಾಮವಾರು, ತಾಲ್ಲೂಕುವಾರು ವಿವರ ನೀಡುವುದು);

ಆ) ಮುಳುಗಡೆಯಾಗುವ ರೈತರಿಗೆ ಪರಿಹಾರ ನೀಡಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಇದುವರೆಗೆ ಯಾವ ಕ್ರಮ ಕೈಗೊಂಡಿದೆ;

ಇ) ಅಣೆಕಟ್ಟೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಎಂದಿನಿಂದ ನಿಲ್ಲಿಸಲಾಗುವುದು;

ಈ) ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ತನಕ ಸದರಿ ಅಣೆಕಟ್ಟೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನೀರು ನಿಲ್ಲಿಸದಿರಲು ಆ ಭಾಗದ ನಿರ್ವಸತಿಗರು ಮತ್ತು ಜನ ಪ್ರತಿನಿಧಿಗಳು ಮಾಡಿರುವ ಮನವಿ ಸರ್ಕಾರದ ಗಮನದಲ್ಲಿ ಇದೆಯೇ;

ಉ) ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುವ ಜಮೀನು ವಿಸ್ತೀರ್ಣವು 131ಎ–14 ಗುಂ. ಇದು ನಿರ್ವಸತಿಗರಾಗುವ ಜನಸಂಖ್ಯೆ 2635. ಗ್ರಾಮವಾರು ಹಾಗೂ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಅ)	ಲಿಂಗಾಪುರ	–	23ಎ–12 ಗುಂ.
ಆ)	ಕಣಗಾಲಕೊಪ್ಪ	–	64ಎ–38 ಗುಂ.
ಇ)	ಬೊಮ್ಮನಹಳ್ಳಿ	–	2ಎ–16ಗುಂ.
			90ಎ–26ಗುಂ.

2. ಎನ್.ಆರ್. ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಅ) ಮುತ್ತಿನಕೊಪ್ಪ – 1ಎ–37 ಗುಂ.

ಆ) ಕೆ. ಕಣಬೂರು – 38ಎ–31 ಗುಂ.

ಯೋಜನೆಯಡಿ ಒಟ್ಟು40ಎ–28 ಗುಂ.

ನಿರ್ವಸತಿಗರಾಗುವ ಜನರ ಸಂಖ್ಯೆ

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಅ) ಲಿಂಗಾಪುರ ಗ್ರಾಮ – 1813

ಆ) ಕಣಗಾಲಕೊಪ್ಪ ಗ್ರಾಮ – 822

ಒಟ್ಟು 2635

ಅ) ಮುಳುಗಡೆಯಾಗುವ ರೈತರಿಗೆ ಪರಿಹಾರ ನೀಡಲು ಗ್ರಾಮವಾರು ಪ್ರಸ್ತಾವನೆಯು ಜಂಟಿ ಅಳತೆಯ ಮುಂದಿನ ಪ್ರಕ್ರಿಯೆಯಲ್ಲಿರುತ್ತದೆ.

ಪುನರ್ವಸತಿ ಕುರಿತಾಗಿ ಕೇಂದ್ರವನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಮತಿಯಿಂದ ಶಿವಮೊಗ್ಗ ತಾಲ್ಲೂಕು ನಿದಿಗೆ ಹೋಬಳಿ ಮಾಚೇನಹಳ್ಳಿ ಗ್ರಾಮದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವಸತಿ ನಿವೇಶನಗಳ ಪೈಕಿ ನಿವೇಶನ ನೀಡಲು ಪುನರ್ವಸತಿ ಸಲಹಾ ಸಮಿತಿಯ ನಿರ್ಣಯದ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರಕ್ಕೆ ರೂ. 150.00 ಲಕ್ಷಗಳನ್ನು ಮಾರ್ಚ್ 2004ರಲ್ಲಿ ಪಾವತಿಸಲಾಗಿದೆ. ಅಭಿವೃದ್ಧಿ ಕಾರ್ಯಗಳು ಪ್ರಾಧಿಕಾರದ ವತಿಯಿಂದ ಪ್ರಗತಿಯಲ್ಲಿವೆ. ಸಂತ್ರಸ್ಥರ ಆಸ್ತಿಪಾಸ್ತಿಗಳ ಮೌಲ್ಯೀಕರಣ ಕಾರ್ಯ ಮುಗಿದಿದ್ದು, ಅಂದಾಜುಗಳು ತಾಂತ್ರಿಕ ಪರಿಶೀಲನೆ ಹಂತದಲ್ಲಿದೆ.

ಇ) ಪುನರ್ವಸತಿ ಕೇಂದ್ರ ನಿರ್ಮಿಸಿ, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಳಿಸಿದ ನಂತರ ಅಣೆಕಟ್ಟೆಯಲ್ಲಿ ಪೂರ್ಣಪ್ರಮಾಣದಲ್ಲಿ ನೀರನ್ನು ಎಫ್.ಆರ್.ಎಲ್. ಮಟ್ಟದವರೆಗೆ ನಿಯಂತ್ರಿಸುವ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಇದೆ.

ಉ) ಮುಳುಗಡೆ ಪರಿಹಾರ ಹಾಗೂ ಪುನರ್ವಸತಿ / ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಳ್ಳದೆ ಅಣೆಕಟ್ಟೆಯಲ್ಲಿ ತುಂಬು ನೀರಿನ ಮಟ್ಟ (ಎಫ್.ಆರ್.ಎಲ್). ದವರೆಗೆ ನೀರು ನಿಲ್ಲಿಸುವ ಉದ್ದೇಶ ಇರುವುದಿಲ್ಲ.

536(793) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವರಾಹಿ ಯೋಜನೆಯ ಪ್ರದೇಶವಾದ ಮಾಸ್ತಿಕಟ್ಟೆಯಲ್ಲಿ ನಿಗಮಕ್ಕೆ ಸಂಬಂಧಪಟ್ಟ ಯಾವ ಯಾವ ಕಛೇರಿಗಳಿವೆ; ಹಾಗೂ ಅಲ್ಲಿರುವ ಅಧಿಕಾರಿಗಳ ಮತ್ತು ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು;

ಆ) ಅಲ್ಲಿರುವ ಕಛೇರಿಗಳನ್ನು ಅನಗತ್ಯವಾಗಿ ಹೊಸಂಗಡಿಗೆ ಸ್ಥಳಾಂತರಿಸಿರುವುದು ನಿಜವೇ;

ಇ) ಇದಕ್ಕೆ ಕಾರಣಗಳೇನು;